13





14 ಕೆಲಕಾಲ ದೀಕ್ಷಿತರು ಅಂಧತ್ವದಿಂದ ನರಳಿದರು. ಆ ಸಮಯದಲ್ಲಿ ಕೂಡ ಜಗನ್ಮಾತೆಯ ಮೇಲೆ ಸ್ತೋತ್ರಗಳನ್ನು ರಚಿಸಿದರು.




15 ಈ ಪ್ರಾರ್ಥನೆಯಿಂದ ದೇವಿ ಮೀನಾಕ್ಷಿಯ ಹೃದಯ ಕರಗಿತು. ತನ್ನ ಭಕ್ತನು ಕುರುಡುತನದಿಂದ ನರಳುತ್ತಿರುವುದನ್ನು ಅವಳಿಗೆ ಇನ್ನು ಸಹಿಸಲು ಸಾಧ್ಯವಾಗಲಿಲ್ಲ. ದೀಕ್ಷಿತರಿಗೆ ದರ್ಶನ ಕೊಟ್ಟು, ದೃಷ್ಟಿಯನ್ನು ಮರಳಿ ದಯಪಾಲಿಸಿದಳು.




16 ಜಗನ್ಮಾತೆ ಮೀನಾಕ್ಷಿಯ ಅನುಗ್ರಹದಿಂದ ದೀಕ್ಷಿತರು ತಮ್ಮ ದೃಷ್ಟಿಯನ್ನು ಮರಳಿ ಪಡೆದುದು ರಾಜನಿಗೆ ತಿಳಿದುಬಂತು. ತನ್ನ ತಪ್ಪಿನ ಅರಿವಾಗಿ ಅವನು ದೇವಾಲಯಕ್ಕೆ ಓಡೋಡಿ ಬಂದ.




17 ಅಂಧರಾಗಿದ್ದಾಗ ದೀಕ್ಷಿತರು ರಚಿಸಿ, ದೇವಿ ಮೀನಾಕ್ಷಿಯ ಮುಂದೆ ಭಾವೋನ್ಮತ್ತರಾಗಿ ಹಾಡಿದ ಸ್ತೋತ್ರಗಳು **'ಆನಂದಸಾಗರ ಸ್ತವಂ'** ಎಂದು ಪ್ರಸಿದ್ಧವಾಗಿವೆ. ದೃಷ್ಟಿಹೀನರಾದವರು ಇವುಗಳನ್ನು ಭಕ್ತಿಯಿಂದ ಪಠಿಸಿದರೆ, ಅಂಧತ್ವ ನೀಗುವುದೆಂಬ ನಂಬಿಕೆ ಜನರಲ್ಲಿದೆ.



18 **ಮನುಷ್ಯಜೀವಿಗಳನ್ನು ಅವಲಂಬಿಸುವುದಕ್ಕಿಂತ, ಭಗವಂತನ ಅನಂತಕೃಪೆಯನ್ನೇ ಅವಲಂಬಿಸುವುದು ಉತ್ತಮವಲ್ಲವೇ? ಪರಿಶುದ್ಧ ಮನಸ್ಸಿನವನಾಗು; ಭಗವಂತನಲ್ಲಿ ಶ್ರದ್ಧೆ ಬೆಳೆಸಿಕೋ; ಯಾವತ್ತೂ ಅವನನ್ನೇ ಅವಲಂಬಿಸಿ ಜೀವನ ನಡೆಸು. ಆಗ ನೀನು ಒಳ್ಳೆಯ ಮಾರ್ಗದಲ್ಲಿಯೇ ನಡೆಯುತ್ತೀಯೆ. ನಿನ್ನನ್ನು ಯಾರೂ ಸೋಲಿಸರಾರರು.**